## ಸಮಾಜ ನಿರ್ಲಕ್ಷಿಸಿದ ಮಂಗಳಮುಖಿಯರು

ಡಿ. 05ರ ಸಂಚಿಕೆಯಲ್ಲಿ ಕೆ. ರಾಘವೇಂದ್ರ ಅವರು ಬರೆದ 'ಮಂಗಳಮುಖಿಯರ ಮಾಡೆಲಿಂಗ್' ಲೇಖನ ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೊಳಗಾದ ಮಂಗಳಮುಖಿಯರ ಬಗ್ಗೆ ಉತ್ತಮ ನೋಟ ಒದಗಿಸಿತು. ನ್ಯಾ. ಮಂಜುಳ ಚೆಲ್ಲೂರ್ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿದ್ದಾಗ ಮಂಗಳಮುಖಿಯರೊಬ್ಬರಿಗೆ ಉಚ್ಚ ನ್ಯಾಯಾಲಯದಲ್ಲಿ ಉದ್ಯೋಗ ನೀಡಿದ್ದನ್ನು ಬಿಟ್ಟರೆ ನಂತರ ಅಂತಹ ಪ್ರಯತ್ನ ಮತ್ತೆ ನಡೆದದ್ದು ಕೇಳಿ ಬರಲಿಲ್ಲ. ಶಾರೀರಿಕವಾಗಿ ದೃಢಕಾಯರಾದ ಮಂಗಳಮುಖಿಯರನ್ನು ಮಹಿಳಾ ಶಾಲಾ ಕಾಲೇಜುಗಳಲ್ಲಿ ರಕ್ಷಣಾ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳಬಹಾದಾಗಿದ್ದರೂ ಆ ಪ್ರಯತ್ನಕ್ಕೆ ಯಾರೂ ಮುಂದಾಗದಿರುವುದು ವಿಪರ್ಯಾಸ. ಛಾಯಾಚಿತ್ರಗಾರ ಕೆ.ವೆಂಕಟೇಶ್ ಪ್ರಯತ್ನ ಸ್ವಾಗತಾರ್ಹ.

— ಕೊ.ಸು. ನರಸಿಂಹ ಮೂರ್ತಿ,ಮೈಸೂರು

'ಮಂಗಳಮುಖಿಯರ ಮಾಡೆಲಿಂಗ್' ಲೇಖನ, ತೃತೀಯ ಲಿಂಗಿಗಳನ್ನು ಕ್ಯಾಮರಾದ ಕಣ್ಣಿನ ಮೂಲಕ ಸೆರೆಹಿಡಿದ ಚಿತ್ರಗಳು ಯಾವ ತಾರೆಯರಿಗೂ ಕಡಿಮೆಯಿಲ್ಲ ಎನ್ನುವಂತಿವೆ. ಆದರೆ ಇವರನ್ನು ನೋಡುವ ದೃಷ್ಟಿ ಇನ್ನೂ ಬದಲಾಗದೇ ಇರುವುದು ವಿಪರ್ಯಾಸ.

ದೇವರು ಇವರನ್ನು ಸೃಷ್ಟಿಸುವಾಗ ಅದೇನು ಮರೆತಿರುವನೋ ತಿಳಿಯದು. ಶರಣರ ದೃಷ್ಟಿಯಲ್ಲಿ 'ಒಳಗೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ'. ಆದರೆ ಈ ಲೋಕದಲ್ಲಿ ಇವರು ಅನುಭವಿಸುವ ನೋವು ಅಪಾರ. ಇಂದು ನಿಜಕ್ಕೂ ಮಾಡದ ತಪ್ಪಿಗೆ ಅಪಹಾಸ್ಯಕ್ಕೀಡಾಗಿ, ತುತ್ತಿನ ಚೀಲ ತುಂಬಿಸಿಕೊಳ್ಳಲು ಪರದಾಡುವ ದಯನೀಯ ಸ್ಥಿತಿಯಲ್ಲಿ ಅವರಿದ್ದಾರೆ. ಈ ಲೇಖನ ಕಣ್ಣು ಮುಚ್ಚಿದ ಮುಕ್ಕಣ್ಣನಿಗೂ ಕಣ್ಣು ತೆರೆಸುವಂತಿದೆ.

—ಮಲ್ಲಿಕಾರ್ಜುನ ಗಚ್ಚಿ, ಕಲಬುರ್ಗಿ



## ಜಾಗೃತಿ ಮೂಡಿಸುವ ಲೇಖನ

ನ.28ರ ಸಂಚಿಕೆಯಲ್ಲಿ ಟಿ. ಆರ್. ಅನಂತರಾಮು ಬರೆದಿರುವ 'ನೆಲ ಮುಗಿಲು ವಿಷವಾಯ್ತು' ಲೇಖನ ಜಾಗೃತಿ ಮೂಡಿಸುವ ಹಾಗಿತ್ತು. ಇಡೀ ಮನುಕುಲಕ್ಕೆ ಎಚ್ಚರಿಕೆಯ ಗಂಟೆಯ ಹಾಗೆಯೇ ಆ ಲೇಖನ ಮೂಡಿಬಂದಿದೆ. ಅವರಿಗೆ ಅಭಿನಂದನೆ.



'ಸುಧಾ' ಪತ್ರಿಕೆಯಲ್ಲಿ, ಮುಂದಿನ ಸಂಚಿಕೆಗಳಲ್ಲಿ ಮನೆಯ ಒಳಾಂಗಣದಲ್ಲಿ ಬೆಳೆಯ ಬಹುದಾದ ಗಿಡಗಳ ಕುರಿತು ಮಾಹಿತಿ ನೀಡಿದರೆ ಉಪಯುಕ್ತವಾಗಿರುತ್ತದೆ. ಇದರಿಂದ ಮನೆಯ ಸೌಂದರ್ಯವೂ ಹೆಚ್ಚುತ್ತದೆ. ಹಾಗೆಯೇ ಪರಿಸರ ರಕ್ಷಣೆಗೂ ಪೂರಕವಾಗುತ್ತದೆ.

—ರಾಜಿ

## ಅಸೂಕ್ತ ಉತ್ತರ

ಡಿ. 12ರ ಸಂಚಿಕೆಯ 'ನೀವು ಕೇಳಿದಿರಿ' ಮಾಲಿಕೆಯಲ್ಲಿ ಪ್ರಕಟವಾಗಿರುವ ಪ್ರಶ್ನೋತ್ತರವೊಂದರಲ್ಲಿ, ಸರ್ಕಾರದ ಅನ್ನಭಾಗ್ಯ, ಕ್ಷೀರಭಾಗ್ಯ ಯೋಜನೆಗಳನ್ನು ರಾಮ್ ಅವರು 'ಶುದ್ಧ ಭಿಕ್ಷೆ' ಎಂದಿರುವುದು ಮನಸ್ಸಿಗೆ ನೋವು ತಂದಿತು. ಇದು ತೀರಾ ಅಸೂಕ್ತ ಉತ್ತರ. ಬಡವರಿಗೆ ನೀಡುವ ಆಹಾರ, ಮಕ್ಕಳಿಗೆ ನೀಡುವ ಹಾಲನ್ನು ಭಿಕ್ಷೆ ಎನ್ನುವುದು ಅಮಾನವೀಯ. ನಿಲುವಿಗೆ 'ಸುಧಾ'ದಲ್ಲಿ ಅವಕಾಶ ದೊರೆಯಬಾರದಿತ್ತು.

—ಎಂ. ರಾಜಶೇಖರ, ಚಾಮರಾಜನಗರ

## ಕಲೆಗೆಲ್ಲಿದೆ ವೈಕಲ್ಯದ ಹಂಗು?

ಡಿ. 05ರ ಸಂಚಿಕೆಯಲ್ಲಿ ವೀಣಾಜೋಶಿ ಬಾರ್ಕೂರು ಬರೆದ ಲೇಖನ 'ಕಲೆಗೆಲ್ಲಿದೆ ವೈಕಲ್ಯದ ಹಂಗು?' ವಿಕಲಚೇತನರಲ್ಲಿ ಸ್ಫೂರ್ತಿ ತುಂಬುವಂತಿದೆ. ಅಂಗವೈಕಲ್ಯವನ್ನು ಛಲ ಮತ್ತು ಮನೋಸ್ಥೈರ್ಯದಿಂದ ಗೆದ್ದ ಲಲಿತಾ ಕೊರವಡಿಯವರು, ಕರುಣೆ ಅನುಕಂಪಗಳ ಬದಲಾಗಿ, ಪ್ರೀತಿ ಪ್ರೋತ್ಸಾಹಗಳನ್ನು ನೀಡಿದರೆ ತಾವೂ ಅದ್ಭುತಗಳನ್ನು ಸೃಷ್ಟಿಸಬಲ್ಲೆವೆಂಬುದನ್ನು ಸಾಬೀತುಪಡಿಸಿದ್ದಾರೆ!

—ರಾಮಚಂದ್ರ ಪೈ

'ಕಲೆಗೆಲ್ಲಿದೆ ವೈಕಲ್ಯದ ಹಂಗು' ಲೇಖನ ಮನಮುಟ್ಟಿತು. ಲಲಿತಾ ಕೊರವಡಿಯವರ ಅದಮ್ಯ ಆತ್ಮವಿಶ್ವಾಸ, ಛಲ ಮತ್ತು ಜೀವನ ಕಲೆ ಎಂತಹವರಿಗೂ ಸ್ಫೂರ್ತಿಯ ಸೆಲೆ. ಅಂಗವೈಕಲ್ಯವು ಶಾಪವಲ್ಲ ಎಂದು ಅವರು ನಿರೂಪಿಸಿದ್ದಾರೆ. ಅವರ ಕರಕುಶಲ ಕಲೆ, ಹವ್ಯಾಸ, ತರಕಾರಿ ಬೆಳೆಯುವ ಕಾಯಕ ಎಲ್ಲವೂ ಬದುಕಿನೆಡೆ ಇರುವ ಅಪರಿಮಿತ ಒಲವನ್ನು ತೋರಿಸುತ್ತದೆ. ನಮ್ಮಂತಹವರನ್ನೂ ಒಮ್ಮೆ ಯೋಚನೆ ಮಾಡುವಂತೆ ಮಾಡುತ್ತದೆ ಈ ಲೇಖನ.

—ರೂಪಶ್ರೀ ಎಚ್.ಎಲ್.

'ಕಲೆಗೆಲ್ಲಿದೆ ವೈಕಲ್ಯದ ಹಂಗು' ಲೇಖನವು ಸಮಯೋಚಿತವಾಗಿದೆ. ವೈಕಲ್ಯವು ಎಲ್ಲ ಅಡೆ ತಡೆಗಳನ್ನು ಮೀರಿ ನಿಲ್ಲುತ್ತದೆ ಎನ್ನುವುದಕ್ಕೆ ಲಲಿತಾ ಕೊರವಡಿಯ ಉದಾಹರಣೆ ಸಾಕ್ಷಿಯಾಗಿದೆ. ವಿಕಲಚೇತನರನ್ನು ಮುಖ್ಯವಾಹಿನಿಗೆ ತರುವಲ್ಲಿ ಎಲ್ಲರ ಪಾತ್ರ ಅತ್ಯಗತ್ಯ. ಪ್ರಸ್ತುತ ವೀಣಾ ಅವರ ಲೇಖನ ಅರ್ಥಪೂರ್ಣವಾಗಿದೆ.

—ಕ್ರಿಸ್ತ ದಯಾಕುಮಾರ್, ತರೀಕೆರೆ.

## ಸೊಗಸಾದ ಕಥನ ಪ್ರಬಂಧ

ಡಿ. 5ರ ಸಂಚಿಕೆಯಲ್ಲಿ ವಿಜಯಕಾಂತ ಪಾಟೀಲ ಬರೆದಿರುವ 'ಉದಯೋನ್ಮುಖ ಕವಿಯೂ ಅವನ ಸಂಶೋಧನೆಯೂ' ಎಂಬ ಕಥನ ಪ್ರಬಂಧ ತುಂಬಾ ಸೊಗಸಾಗಿ ಮೂಡಿಬಂದಿದೆ. ಸದರಿ ಪ್ರಬಂಧದಲ್ಲಿ ಹಿರಿಯ ಲೇಖಕರು ಕಿರಿಯ ಸಾಹಿತಿಯನ್ನು ತರಕಾರಿ ತರಲು ಬಳಸಿಕೊಂಡಿದ್ದರಲ್ಲಿ ತಪ್ಪೇನೂ ಇಲ್ಲ ಅನಿಸುತ್ತದೆ. ಸಂಶೋಧನೆ ಮಾಡಬೇಕು, ನಾನು ಬೆಳೆಯಬೇಕು, ನನ್ನ ಬರಹಗಳು ಪ್ರಕಟವಾಗಬೇಕು ಎಂಬ ತುಡಿತ ಹಾಗೂ ತವಕಗಳ ಸ್ವರೂಪಗಳೇ ಕಿರಿಯ ಸಾಹಿತಿಗಳಿಗೆ ಮಂಕುಬೂದಿ ಎರಚುತ್ತವೆ.

—ಪ. ಚಂದ್ರಕುಮಾರ, ಗೌನಹಳ್ಳಿ

## ಒಂದು ಹಳೆಯ ಕತೆ

ನ.28ರ ಸಂಚಿಕೆಯಲ್ಲಿ ಪ್ರಕಟವಾದ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ 'ಒಂದು ಹಳೆಯ ಕತೆ' ಆಡುಭಾಷೆಯಲ್ಲಿ ತುಂಬಾ ಚೆನ್ನಾಗಿ ಮೂಡಿಬಂದಿದೆ. ವಂಡರ್ ಪುಟದಲ್ಲಿ ಪ್ರಕಟವಾದ ಪ.ನಾ. ಹಳ್ಳಿ ಹರೀಶ್ ಕುಮಾರ್ 'ಫಿಂಗರ್ ಮಂಕಿ' ಚಿತ್ರ–ಬರಹ ಕೂಡ ಚೆನ್ನಾಗಿತ್ತು.

—ನೀಲಮ್ಮ ಕುಮಾರಪ್ಪ, ಲಿಂಗಸುಗೂರು



## ಮೇರು ಪ್ರತಿಭೆ ಮಯಂಕ್

ಡಿ. 5ರ ಸಂಚಿಕೆಯಲ್ಲಿ ಓಂಕಾರಮೂರ್ತಿಯವರ 'ಹೊಸ ಮಿಂಚು ಮಯಂಕ್' ಕ್ರಿಕೆಟ್ ಪ್ರಿಯರಿಗೆ ಮಿಂಚಿನಂತೆ ಕೋರೈಸಿದೆ. ಮಯಂಕ್ ಅಗರ್ವಾಲ್ ಅವರ ಅಪ್ಪಟ ಪ್ರತಿಭೆಯನ್ನು ಸೊಗಸಾಗಿ ವಿವರಿಸಲಾಗಿದೆ. ಕ್ರಿಕೆಟ್ ಜೀವನದಲ್ಲಿ ಅಗರ್ವಾಲ್ ನಡೆದು ಬಂದ ರೀತಿಯನ್ನು ಯಾರಾದರೂ ಮೆಚ್ಚಲೇ ಬೇಕು.

—ಚನ್ನಗಿರಿ ಕೇಶವಮೂರ್ತಿ, ಬೆಂಗಳೂರು